ಆರ್ಟ್ಸ್ ಕಾಲೇಜಿನ ಗೇಟಿನ ಎದುರು ನಿಂತಿದ್ದ ಸಲೀಮ್ ಸುಂದರ್. ರಸ್ತೆಯ ಮೇಲೆ ಸಣ್ಣದಾಗಿ ಮಳೆ. ಬೆಳಿಗ್ಗೆಯಿಂದ ಮಳೆ ಹನಿಯುತ್ತಲೇ ಇತ್ತು. ನದಿ ಮಧ್ಯೆ ದೋಣಿ ನೀರನ್ನು ಸೀಳಿದಂತೆ ಜನ ಕೊಡೆಗಳಿಂದ, ರೇನ್‌ಕೋಟ್‌ಗಳೊಂದಿಗೆ ಬಸ್ಸಿನಿಂದ ಇಳಿಯುತ್ತಿದ್ದರು. ಇದ್ದಕ್ಕಿದ್ದಂತೆ ಜೋರಾಗಿ ಗುಡುಗುವ ಮಳೆ ಮೋಡಗಳು.

ಹಸಿರು ಬಣ್ಣದ ಜರ್ಕಿನ್ ತೊಟ್ಟ ಹುಡುಗಿಗಾಗಿ ಕಾಯುತ್ತಿದ್ದ ಸಲೀಮ್. ಆ ಹುಡುಗಿಯ ಹೆಸರು ಮನೋರಮ. ಹೀಗೆ ಮನೋರಮಳಿಗಾಗಿ ಕಾಯುವುದು, ಅದರಲ್ಲೂ ಮಳೆ ಹನಿಗಳ ನಡುವೆ ಅತ್ಯಂತ ಇಷ್ಟವಾದ ಕೆಲಸ ಸಲೀಮನಿಗೆ. ಈ ದಿನ ಅವನಿಗೆ ಮಳೆ ಹನಿಗಳ ಸ್ಪರ್ಶ ಯಾವ ಸಂತೋಷವನ್ನೂ ಕೊಡುತ್ತಿಲ್ಲ. ಅವನು ಆತಂಕಗೊಂಡಿದ್ದ. ಅರ್ಥವಾಗದ ಯಾವುದೋ ಭಯ ಆವರಿಸಿಕೊಂಡಿತ್ತು.

ಹನ್ನೊಂದು ತಿಂಗಳ ಉದ್ಯೋಗಕ್ಕೆ ಈ ದಿನ ಬೆಳಿಗ್ಗೆ ಬಲವಂತದ ವಿದಾಯ. ಬೆಳಿಗ್ಗೆ ಇದ್ದಕ್ಕಿದ್ದಂತೆ ಆಫೀಸಿನ ಮುಂದೆ ಲಾಕೌಟ್ ಬೋರ್ಡ್ ನೇತುಹಾಕಲಾಗಿತ್ತು. ಪತ್ರಿಕೆ ಮುಚ್ಚುತ್ತಿದ್ದೇವೆ ಎಂದರು. ಹತಾಶನಾಗಿದ್ದ ಸಲೀಮ್. ಪತ್ರಿಕೆ ನಿಂತು ಹೋಗುತ್ತದೆಯೆಂಬ ಪುಕಾರು ಇದ್ದಿತಾದರೂ ಇಷ್ಟು ಬೇಗ ಎಂದು ಆತ ಊಹಿಸಿರಲಿಲ್ಲ. “ಪತ್ರಿಕೆಯನ್ನು ಕೊಂದುಬಿಟ್ಟರು” ಎಂದು ಜೊತೆಯಲ್ಲಿ ನಿಂತಿದ್ದ ವೃದ್ಧಪತ್ರಕರ್ತರೊಬ್ಬರು ನಿಟ್ಟುಸಿರುಬಿಟ್ಟರು. ಆಫೀಸಿನ ಗೇಟಿನ ಹೊರಗೆ ನೆರೆದಿದ್ದ ಸಿಬ್ಬಂದಿ ಸಮೂಹ ಸಂತಾಪ ಸಭೆಗೆ ಸೇರಿದಂತಿತ್ತು. ಸಾವಿರಾರು ಸಾವುಗಳಿಗೆ ಸಮನಾದ ಸಂತಾಪ. ಸಲೀಮ್ ಆ ಗುಂಪಿನಿಂದ ತಪ್ಪಿಸಿಕೊಂಡು ಯುನಿವರ್ಸಿಟಿ ಕಡೆ ಹೆಜ್ಜೆಹಾಕಿ, ಆರ್ಟ್ಸ್ ಕಾಲೇಜಿನ ಮುಂದೆ ನಿಂತು, ಮನೋರಮಳಿಗಾಗಿ ಕಾಯುತ್ತಿದ್ದ. ಸಿಗರೇಟ್ ಹೊತ್ತಿಸಿಕೊಂಡು ಕಾರಿಡಾರ್ ಉದ್ದಕ್ಕೂ ಬೇಸರಬರುವಂತೆ ಓಡಾಡಿದ. ಆ ಕಡೆ ಕಾರಿಡಾರಿನಲ್ಲಿ ಎಲ್ಲೋ ಹಸಿರು ಬಣ್ಣ ಹೊಳೆದಂತೆ... “ಮನೋ” ಎಂದು ಜೋರಾಗಿ ಕೂಗಿದ. ಟೆರೇಸ್ ಮೇಲಿಂದ ಜಾರುತ್ತಿದ್ದ ಮಳೆಹನಿಗಳ ಸದ್ದಿನೊಂದಿಗೆ ಆ ಕೂಗು ಸೇರಿಕೊಂಡಿತು. ಆ ಹಸಿರು ಜರ್ಕಿನ್ ಹುಡುಗಿ ಮನೋರಮ ಆಗದಿರಬಹುದು. ಆದರೆ ಹಸಿರು ಬಣ್ಣದ ಜರ್ಕಿನ್ ಅನ್ನು ಮನೋರಮಳ ಸಂಕೇತವೆಂದು ನೆನಪಿಟ್ಟುಕೊಳ್ಳುವುದು ಇಷ್ಟ ಸಲೀಮನಿಗೆ. ದೂರದಲ್ಲಿ ಕ್ಲಾಸ್‌ರೂಮಿನ ಬಾಗಿಲಲ್ಲಿ ಮತ್ತೊಮ್ಮೆ ಹಸಿರುಬಣ್ಣ ಮಿಂಚಿ ಮರೆಯಾದಂತಾಯಿತು. ಆಕಾಶದ ತುಂಬಾ ಮಳೆ ಹನಿಗಳು. ನದಿಯನ್ನು ನೆನಪಿಸುವ ನೀರು ತುಂಬಿದ ರಸ್ತೆ. ಕೆತ್ತಿದ ವಿಗ್ರಹದಂತಿರುವ ಯುನಿವರ್ಸಿಟಿ ಕಟ್ಟಡ. ಎಷ್ಟೋದಿನಗಳಿಂದ ಅವನಲ್ಲಿ ಹಸಿರು ಜರ್ಕಿನ್ ಹುಡುಗಿಗಾಗಿ ಕಾಯುತ್ತಿರುವ ವಿಚಿತ್ರವಾದ ಉದ್ವೇಗ. ಸಲೀಮನಿಗೆ ಹನ್ನೊಂದು ತಿಂಗಳ ಹಿಂದಿನ ತನ್ನ ಬದುಕಿನ ದೃಶ್ಯಗಳು ಇದ್ದಕ್ಕಿದ್ದಂತೆ ನೆನಪಿಗೆ ಬಂದವು.

ಹೋಟೆಲ್ ಮಾಣಿ, ರೇಲ್ವೆಸ್ಟೇಶನ್‌ನಲ್ಲಿ ಪೋರ್ಟರ್ ಯಾವ ಕೆಲಸಕ್ಕಾದರೂ ಸೈ ಎಂದು ನಿರ್ಧರಿಸಿದ್ದ ಸಮಯದಲ್ಲಿ ಪತ್ರಿಕೆಯೊಂದರಿಂದ ಕೆಲಸಕ್ಕೆ ಕರೆ ಬಂದಿತ್ತು. ತುಂಬಾ ದಿನಗಳ ಹಿಂದೆ ಎಂದೋ ಬರೆದ ಕವಿತೆಗಳನ್ನು ಹಿಡಿದು ಹೋಗಿದ್ದ. ನಾಲ್ಕೈದು ಸಾಲುಗಳನ್ನು ಓದಿ ಸಂಪಾದಕರು ಅವು ಅದ್ಭುತ ಕವಿತೆಗಳೆಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅಚಾನಕ್ ಆಗಿ ಪತ್ರಿಕೆಯಲ್ಲಿ ಕೆಲಸ ಸಿಕ್ಕೇಬಿಟ್ಟತ್ತು. ಸಂಪಾದಕರು ಹೈದರಾಬಾದ್ ಕುರಿತು ನಾಲ್ಕು ಸಾಲುಗಳನ್ನು ಬರೆಯಲು ಹೇಳಿದರು.

“ಬಸ್ಸು, ರಸ್ತೆ ಬದುಕಿನ ನೂರಾರು ತಾಸುಗಳನ್ನು ರಸ್ತೆ ಮೇಲೆ ಕಳೆಯುವುದು/ ಹೈದರಾಬಾದ್ ಒಂದು ನಿರ್ಮಿತ ಮೂರ್ತಿ/ ರೌಡಿಶೀಟರ್/ ಜಾಡಿಸಿ ಮುಖದ ಮೇಲೆ